# Kannada Kali Poetry Challenge 25

This is a challenge to **all** to write **Kannada poems**. This is a great way express and  learn Kannada.  Poetry allows one to express freely and without “strict” grammatical rules.

The poems can be simple rhymes, short poems, or long verses. Subjects can be things, people, nature, society, their observation or experience. Following sample poems are examples of different levels of competency. This should give an idea of what can be expected for students.

Please note this is not a competition but a challenge to learn and reach higher levels. Everyone is a winner as one would have learnt a little more.

There is no limit to their imagination and no limit to the number of submissions.

Kannada Kali Teachers are requested to further explain, perhaps using the samples below, and inspire the students. Parents should urge their children to participate, guide,  and assist where necessary without you writing the poem for them. For children who cannot write Kannada script, parents can write it down.

**Can parents submit their own poems? Yes, the challenge is open to all**.

For those who submit them in time, let us showcase during the upcoming Kannada Kali Silver Jubilee celebrations.   We will have a poetry booth where the poets will read their poems in front of a ready audience. Regardless please send them to kannadakali25@gmail.com or Text/WhatsApp 714-322-9748.

**Each submission should include their photo, name,and where applicable,  KK Level, KK Center name, KK Teacher name, and regular School grade. Also include contact info – phone and email.**

---

# ಉದಾಹರಣೆಗಳು

---

## ಗೇಟು-ತಾಟು

ಮನೆಯ ಮುಂದೆ ಗೇಟು

ನಾಯಿ ಮುಂದೆ ತಾಟು

ತಾಟಿನೊಳಗೆ ರೊಟ್ಟಿ

ನಾಯಿ ತಿಂದಾಯಿತು ಜಟ್ಟಿ

- *ವಿಶ್ವಾಸ, ಹಾಯರ್ ಕೆ.ಜಿ.*

## ಮಳೆ

ಟಪ್ ಟಪ್ ಮಳೆ ಬಂತು

ನಾನು ಮಳೆಯಲ್ಲಿ ಆಡುವೆ

ನನ್ನ ಗೆಳತಿಯ ಕರೆಯುವೆ

ಕೈಕೈ ಹಿಡಿದು ತಿರುಗುವೆ

ನಿಂತ ನೀರಲಿ ಜಿಗಿಯುವೆ

ತಂಪು ಆಗಿ ನೆಗಡಿ ಬಂದರೆ ಸೀನುವೆ

ಜ್ವರ ಬಂದರೆ ಡಾಕ್ಟರ ಕಡೆಗೆ ಓಡುವೆ

- *ಮಹೀನ್, ೨ನೆ ತರಗತಿ*

## ಗಣಪತಿ

ಗಣಪತಿ ಹಬ್ಬ ಬಂದಿತು

ನಮಗೆ ಖುಷಿ ತಂದಿತು

ನಾನು ಪಟಾಕಿ ಹಾರಿಸಿದೆ

ನನ್ನ ಅಂಗಿ ಸುಟ್ಟಿತು

- *ವಿಶ್ವಾಸ, ಹಾಯರ್ ಕೆ.ಜಿ.*

## ಮಳೆ

ರಪ ರಪ ಮಳೆ ಬಂತು

ಮಕ್ಕಳಿಗೆಲ್ಲ ಖುಷಿ ತಂತು

ಅಂಗಳ ತುಂಬಾ ನೀರು

ಅಂಗಿ ಬಿಚ್ಚಿ ಹಾರು

- *ಕೃಷ್ಣಕುಮಾರ, ಪ್ರಾಥಮಿಕ ಶಾಲೆ*

## ಶಬ್ದ

ಸೈಕಲ್ ಗಂಟೆ ಟ್ರಿಣ್ ಟ್ರಿಣ್

ಶಾಲೆ ಗಂಟೆ ಡಣ್ ಡಣ್

ಗಾಬರಿಯಿಂದ ಎದ್ದೆ

ನಿದ್ದೆಗಣ್ಣಲಿ ಬಿದ್ದೆ

- *ಕೃಷ್ಣಕುಮಾರ, ಪ್ರಾಥಮಿಕ ಶಾಲೆ*

## ತಂಗಿ

ಪುಟ್ಟ ತಂಗಿಯೊಮ್ಮೆ

ಪುಟ್ಟ ಹೆಜ್ಜೆ ಇಟ್ಟಳು

ಕಾಲಲಿ ಗೆಜ್ಜೆ ಕಟ್ಟಿ

ಥೈ ಥೈ ಅಂತ ಕುಣಿದಳು

ನಾನು ನೋಡಿ ಕುಣಿದೆನು

- *ರಸನಾ, ೪ನೆ ತರಗತಿ*

## ಗಾಳಿ ಪಟ

ಆಗಸದಲ್ಲಿ ಹಾರು ಪಟ

ಬಣ್ಣ ಬಣ್ಣದ ಗಾಳಿ ಪಟ

ಅಪ್ಪನು ತಂದ ಗಾಳಿ ಪಟ

ಪಟ ಪಟ ಹಾರುವ ನನ್ನ ಪಟ

ಹಿಗ್ಗನು ತರುವ ಗಾಳಿ ಪಟ

ಉದ್ದನೆ ಬಾಲದ ಗಾಳಿ ಪಟ

ಬಾನಲಿ ನೆಲೆಯು ನನ್ನ ಪಟ

- *ಮೃತ್ಯುಂಜಯ, ೪ನೇ ತರಗತಿ*

## ಪುಂಡಲೀಕ

ಪುಂಡಲೀಕ ಬಂದ

ಪುಂಡಿಪಲ್ಲೆ ತಿಂದ

ಪುಂಡನಾದ

ಊರಾಗ ಮೆರದ

ಹೀರೊ ಹೊಂಡಾ ಹತ್ತಿದ

ಹೊಂಡದಾಗ ಬಿದ್ದ

## ಅಣ್ಣ

ಅಣ್ಣನ ಪರೀಕ್ಷೆ ಬಂತು

ಪೇಪರ ಬರಿಯಾಕ ಹೋದ

ಪ್ರಶ್ನೆ ಕಾಗದ ನೋಡಿದ

ಗಳ ಗಳನೆ ಅತ್ತ

ಏನು ಓದಿಲ್ಲ ಅಂದ

ಫೇಲಾಗಿ ಮನಿಗೆ ಬಂದ

- *ಸಿ.ಸು. ವಿಶಾಲಾಕ್ಷಿ, ೨ನೆ ತರಗತಿ*

## ಕಳ್ಳ

ಕಳ್ಳ ಬಂದ, ಕಳ್ಳತನ ಮಾಡಿದ

ಪೋಲಿಸ ಬಂದ, ಫೋನು ಮಾಡಿದ

ಅಂಬರೀಶ ಬಂದ, ಆಮ್ಲೆಟ್ ತಿಂದ

ಜಗ್ಗೇಶ ಬಂದ, ಜಾಡಿಸಿ ಒದ್ದ

- *ಅಮೃತ ಪ್ರಸಾದ, ೫ನೇ ತರಗತಿ*

## ರುಚಿಗಳ ಜಿಲ್ಲೆ

ನಮ್ಮ ನಾಡು ಚಂದ

ರುಚಿಗಳ ಸವಿಯುವದೇ ಅಂದ

ಗದಗ ಜಿಲ್ಲೆ ನೋಡ

ಮಿರ್ಚಿ ಬಾಜಿ ತಿಂದು ನೋಡ

ಧಾರವಾಡ ಜಿಲ್ಲೆ ನೋಡ

ರುಚಿಯಾದ ಪೇಡಾ ತಿಂದು ನೋಡ

ಮಂಡ್ಯ ಜಿಲ್ಲೆ ನೋಡ

ಸಕ್ಕರೆ ರುಚಿ ತಿಂದು ನೋಡ

- *ಚೇತನಕುಮಾರ, ೪ನೆ ತರಗತಿ*

## ಲೂಟಿ

ಒಂದು ಹುಡುಗಿ ಪಾಸಾದಳು

ರ್ಯಾಂಕಿನಲ್ಲಿ

ಕೆಲಸ ಸಿಕ್ಕಿತು ಬ್ಯಾಂಕಿನಲ್ಲಿ

ಮಾಡಹತ್ತಿದಳು ಡ್ಯೂಟಿ

ಬ್ಯಾಂಕೆಲ್ಲ ಲೂಟಿ

- *ವಿಜಯ ೭ನೆ ತರಗತಿ*

## ಯಾರಿವಳು ಗೊತ್ತೆ?

ಅವಳಲ್ಲಿದೆ ನನ್ನ ಅಪಾರ ಭಕ್ತಿ

ನಾನು ಅತ್ತಾಗ ನನ್ನ ಕಣ್ಣೀರು ಒರೆಸುವಳು

ತಪ್ಪು ನಡೆದಾಗ ತಿದ್ದಿ ಬುದ್ದಿ ಹೇಳುವಳು

ಸದಾ ನನ್ನ ಒಳಿತಿಗೆ ದುಡಿಯುವಳು

ನನ್ನ ದಾರಿ ದೀಪ ಅವಳು

ಅವಳು ಯಾರು ಗೊತ್ತೆ?

ಅವಳೇ ನನ್ನ ಪ್ರೀತಿಯ ಹೆತ್ತಮ್ಮ

- *ಪ್ರತಿಮಾ, ೪ನೆ ತರಗತಿ*

## ಚಂದ

ಎಷ್ಟು ಚಂದ ಏನು ಅಂದ

ಶಾಲೆಯು ಕಲಿತರೆ ಆನಂದ

ಬೆಳಗಿನ ಜಾವ ಏಳುವುದು ಚೆಂದ

ಸ್ನಾನ ಮಾಡಿ ಸಮವಸ್ತ್ರ ಧರಿಸುವುದು ಚಂದ

ಶಿರಬಾಗಿ ಹಿರಿಯರಿಗೆ ನಮಿಸುವುದು ಚಂದ

ಗಟ ಗಟ ಹಾಲು ಕುಡಿವುವದು ಚಂದ

ಚಟ ಪಟ ಶಾಲೆಗೆ ಹೋಗುವುದು ಚಂದ

ದೇಶ ಸೇವೆ ಮಾಡುವುದು ಚಂದ

- *ಪ್ರೀತಿ, ಕಾನ್ವೆಂಟ್*

## ಪ್ರಶ್ನೋತ್ತರ

ಮುಗಿಲಲಿ ಮಾತ್ರ

ಚಂದ್ರನೇಕೆ ತೇಲುವ ನಮ್ಮ?

ಕೆಳಗೆ ಬಂದರೆ ಅವನನ್ನು

ಹಿಡಿದುಕೊಳ್ಳುವನೇ ಗುಮ್ಮ!

ನಕ್ಷತ್ರಗಳ ಜೊತೆಗೂಡಿ

ಆಡುವನೇಕಮ್ಮ?

ನಮ್ಮ ಜೊತೆ ಅಡಲು

ಬರಲು ಬೇಸರವೇನಮ್ಮ!

ರಾತ್ರಿಯಲ್ಲಿ ಬೆಳಗಿ

ಹಗಳಲಿ ಮುಳುಗಿ

ಓಡುವನು ಎಲ್ಲಿಗೆಮ್ಮ?

ಎಲ್ಲಿರುವನಮ್ಮ?

- *ಜಗದೀಶ, ೬ನೆ ತರಗತಿ*

## ಆಡೋಣ ಬನ್ನಿ

ಬನ್ನಿರಿ ಬನ್ನಿರಿ ಗೆಳತಿಯರೆ

ತಾರೆಗಳಂತೆ ಹೊಳೆಯೋಣ

ತಂಪಾದ ತಂಗಾಳಿ ಸವಿಯೋಣ

ಸಂತಸದಿಂದಲಿ ನಲಿಯೋಣ

ಹುಣ್ಣಿಮೆಯ ರಾತ್ರಿಯಲಿ ಬೆಳಕಲಿ

ಆಡುತ ಹೊಸತನ ಪಡೆಯೋಣ

ಚಂದಿರನೊಲವಿನ ಮಡಿಲಲ್ಲಿ

ಸುಂದರ ಕನಸನು ಕಾಣೋಣ

ಎಲ್ಲರು ಕೂಡಿ ಆಡೋಣ

ಸಮರಸ ಜೋಕಾಲಿ ಜೀಕೋಣ

ಜೀವದ ಜೀವಾಗಿ ಬಾಳೋಣ

ಒಂದೇ ಭಾವಾದಿ ಬದುಕೋಣ

- *ಸವಿತಾ, ೭ನೇ ತರಗತಿ*

## ಯುದ್ಧ

ಓ ಯುದ್ಧವೇ ನೀನೆಷ್ಟು ಭಯಂಕರ

ನಿನ್ನ ದರ್ಬಾರ ಅದೆಷ್ಟು ಕ್ರೂರ

ಎಲ್ಲದರಮೇಲೆ ನಿನ್ನ ಕರಿಯ ಛಾಯೆ

ನಿತ್ಯ ಜೀವನದಲ್ಲಿ ನಿನ್ನದೇ ಮಾತು

ಯಾರಿಗೆ ಯಾವುದಕ್ಕಾಗಿ ಯುದ್ಧ ಬೇಕು?

ಯಾರು ಹೇಳುವರು?

- *ಶಶಿಧರ, ೮ನೇ ತರಗತಿ*

## ಜನ್ಮ ಭೂಮಿ

ಕನ್ನಡ ನಾಡಿದು ಈ ಪುಣ್ಯ ಭೂಮಿ

ಚಿನ್ನದ ನಾಡಿದು ಹೆಮ್ಮೆಯ ಭೂಮಿ

ವೀರ ಧೀರ ಸಿಂಹದ ಮರಿಗಳ ಭೂಮಿ

ಕವಿ ಕಲಾವಿದರು ಮೆರೆದಿರುವ ಭೂಮಿ

ಸಿರಿ ಗಂಧದ ಕಂಪು ನೀಡುವ ಭೂಮಿ

ಶಾಂತಿ ಸಹನೆಯ ಮಂತ್ರ ಸಾರುವ ಭೂಮಿ

ಇದು ನಮ್ಮ ಕನ್ನಡ ಭೂಮಿ

ಇದೇ ಕನ್ನಡ ಜನರ ಜನ್ಮ ಭೂಮಿ

- *ಗುರುನಾಥ, ೮ನೆ ತರಗತಿ*

## ಕನಸು

ಪ್ರತಿ ಮನುಷ್ಯನಿಗು ಅವನದ್ದೆ ಕನಸು

ಆಗಲೇ ಬೇಕೆಂದು ನನಸು

ಎಂದು ಹೇಳುವುದು ಅವನ ಮನಸು!

ಬಾಳಿನ ಉಸಿರೆ ಕನಸು

ಬಾಳಿನ ಹಸಿರೆ ಕನಸು

ಕನಸಿನ ಆಟದಲ್ಲಿ ಮನಸೇ ಪಾತ್ರಧಾರಿ

ಕನಸಿನ ಆಟದಲ್ಲಿ ಮನಸೇ ಸೂತ್ರಧಾರಿ

ಕನಸು ನನಸಾಗಿಸಲು ಪರಿಶ್ರಮವೇ ಸರಳ ದಾರಿ

- *ಚರಿತಾ, ೯ನೇ ತರಗತಿ*

# ಕನ್ನಡ ಕಲಿ ದಿನ

ಬಂದಿತೊ ಕನ್ನಡ ಕಲಿ ದಿನ
ಕನ್ನಡ ಜಾತ್ರೆಯ ಹಿಗ್ಗಿನ ದಿನ
ಪಾಠಗಳಿಲ್ಲದ ಆಟದ ದಿನ

ಕನ್ನಡ ನಡೆ ನುಡಿಗಳ ಹೊನಲು
ಕನ್ನಡ ನಾಡಿನ ಅಂಗಡಿಗಳು
ಕನ್ನಡ ಅರಿವಿನ ದೀಪದ ಸಾಲು

ತಿರುಗಿಸು ಗಾಲಿಯನೆಸೆ ದಾಳ
ಪೋಣಿಸು ಹೊಸ ಕನ್ನಡ ಪದಗಳ
ಹೊಸೆ ಚೆಂದದ ತಿಳಿ ವಾಕ್ಯಗಳ

ಗೆಳೆಯರ ಸಂಗಡ ನಲಿಯುವ ದಿನ
ಕಲಿಯದೆ ಕಲಿಯುವ ಕನ್ನಡ ದಿನ
ಬಂದಿತೊ ಮತ್ತೆ ಕನ್ನಡ ಕಲಿ ದಿನ